**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. ಸಂಖ್ಯೆ: 96/2022**

**ಪಿರ್ಯಾದಿ** : ಶ್ರೀ ರುದ್ರೇಶ್ ಕೆ.ಆರ್. ಬಿನ್ ಕೆ.ಸಿ.ರಂಗೇಗೌಡ,
ವಯಸ್ಸು ಸುಮಾರು 40 ವರ್ಷ,
ವಾಸ: ಲಕ್ಷ್ಮಿ ಜನಾರ್ಧನ ಬೇಕರಿ ಅಂಡ್ ಸ್ವೀಟ್ಸ್,
ಬೇಲೂರು ರಸ್ತೆ , ಮೂಡಿಗೆರೆ ನಗರ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.

**ವಿರುದ್ಧ**

**ಆರೋಪಿ** : ಶ್ರೀ ಸುರೇಶ್ ಎನ್.ಎಂ. ಬಿನ್ ಮರಿಗೌಡ,
ವಯಸ್ಸು ಸುಮಾರು 45 ವರ್ಷ,
ವಾಸ: ಆಯುಷ್ ಬ್ಯಾಂಗಲ್ ಸ್ಟೋರ್
ಮತ್ತು ಬ್ಯೂಟಿ ಪಾರ್ಲರ್,
ಶ್ರೀರಾಮ್ ಕಾಂಪ್ಲೆಕ್ಸ್, ಜನ್ನಾಪುರ ಗ್ರಾಮ
ಮತ್ತು ಅಂಚೆ, ಮೂಡಿಗೆರೆ ತಾಲ್ಲೂಕು.

**ಆಪಾದನೆಯ ಸಾರಾಂಶ**

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ:-

ಆರೋಪಿಯಾದ ನೀವು ಪಿರ್ಯಾಧಿಗೆ ಪರಿಚಿತರಿದ್ದು, ನೀವು ವ್ಯಾಪಾರ ಮಾಡುವ ಸಲುವಾಗಿ ದಿನಾಂಕ 07.09.2021 ರಂದು ರೂ 1,20,000/- ಗಳನ್ನು ಸಾಲವನ್ನು ಫಿರ್ಯಾದಿಯಿಂದ ನಗದು ರೂಪದಲ್ಲಿ ಪಡೆದುಕೊಂಡು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಗೋಣಿಬೀಡು ಶಾಖೆಯ ಚೆಕ್ ಸಂಖ್ಯೆ:440969, ದಿನಾಂಕ 07.12.2021, ರೂ.1,20,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸಿ.ಡಿ.ಸಿ.ಸಿ. ಬ್ಯಾಂಕ್, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ಸಾಕಷ್ಟು ಹಣವಿರುವುದಿಲ್ಲ (Funds insufficient) ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 24.01.2022 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ

ನೀವು ನೆಗೋಷಿಬಲ್ ಇನ್ಸ್ಟರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ***?***

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ***?*** ಅದು ನಿಮಗೆ ಅರ್ಥವಾಯಿತೇ***?***

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

ಆರೋಪಿಯ ಉತ್ತರಃ

***(***ಆರೋಪಿಗೆ ದಿನಾಂಕ 08.12.2022 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ***,*** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು***.*** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

**Sd/-**

ಮೂಡಿಗೆರೆ
ದಿನಾಂಕಃ 08.12.2022

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ**.**ಎಂ**.**ಎಫ್**.**ಸಿ**,** ಮೂಡಿಗೆರೆ**.**